ಕಾಲ ಎಂದಿಗಿಂತಲೂ ವೇಗವಾಗಿ ಬದಲಾಗುತ್ತಿದೆ. ನಮ್ಮ ಹಳೆಯ ಕತೆ, ಮಹಾಕಾವ್ಯ, ನಿರೂಪಣೆಗಳು ಹಿನ್ನೆಲೆಗೆ ಸರಿದಿವೆ. ಈ ಸಮಯಕ್ಕೇ ವಿಶಿಷ್ಟವಾದ ಕಥನಗಳು, ಅವುಗಳ ಸ್ವರೂಪದ ಬಗ್ಗೆ ನಾಡಿನ ಸಂವೇದಾನಾಶೀಲರು 'ಈ ಕಾಲದ ಕಥನ'ದಲ್ಲಿ ಬರೆದದ್ದು ಇಲ್ಲಿದೆ...



ನನಗೆ ನೆನಪು ಹುಟ್ಟುತ್ತಿದ್ದಾಗ ಬಂಟಮಲೆಯ ದಟ್ಟವಾದ ಕಾಡಿನೊಳಗಿದ್ದ ಸಣ್ಣ ಗುಡಿಸಿಲಿನೊಳಗೆ ಅಮ್ಮ ಕತೆ ಹೇಳುತ್ತಿದ್ದರು. ಸುತ್ತ ಕತ್ತಲೆ. ಕಪ್ಪೆಗಳ ವಟ ವಟ ಸದ್ದು. ಭಯ ಬೀಳಿಸುವ ಆಳುಪಕ್ಕಿಯ ಆರ್ತನಾದದಂತಿದ್ದ ಕೂಗು. ಹೆಚ್ಚೇನೂ ಬೆಳಕು ಚೆಲ್ಲದೆ ಸಣ್ಣಗೆ ಉರಿಯುತ್ತಿದ್ದ ಚಿಮಿಣಿ ದೀಪ.

'ಅಲ್ಲೊಬ್ಬ ತಪಸ್ಸು ಮಾಡುತ್ತಿದ್ದನಂತೆ. ಅವನ ಹೆಸರು ಜನಕ ಮುನಿ. ಅವನ ಮನೆಯೆದುರಿರುವ ದೊಡ್ಡ ಮರದಲ್ಲಿ ದಿನಾ ಒಂದು ಕಪ್ಪು ಕಾಗೆ ಕುಳಿಕೊಂಡು ಕಾ ಕಾ ಎಂದು ಕೂಗುತ್ತಿತ್ತು. ಅದರಿಂದ ರುಷಿಗೆ ತೊಂದರೆಯಾಗುತ್ತಿತ್ತು. ಒಂದು ದಿನ ಜನಕ ಹೇಳಿದ 'ಯಾರು ಕಾಗೆಯನ್ನು ಕೊಲ್ಲುವರೋ ಅವರಿಗೆ ನನ್ನ ಮುದ್ದು ಮಗಳಾದ ಸಿರಿ ಸೀತಾಮು ದೇವಿಯನ್ನು ಮದುವೆ ಮಾಡಿ ಕೊಡುತ್ತೇನೆ ಅಂತ. ಕಾಗೆ ಕೊಲ್ಲಲು ಯಾರೂ ಬರಲಿಲ್ಲ. ಒಂದು ದಿನ ರಾಮ ಮತ್ತು ಲಕ್ಷ್ಮಣ ದೇವರು ಬೇಟೆಗೆ ಹೊರಟರು. ಜನಕ ಹೇಳಿದ್ದನ್ನು ಕೇಳಿಸಿಕೊಂಡರು. ಲಕ್ಷ್ಮಣ ದೇವರು ಮುಂದೆ ಹೋದರು, ರಾಮ ದೇವರು ಹಿಂದೆ ಉಳಿದರು. ಲಕ್ಷ್ಮಣ ದೇವರು ಕಾಗೆಗೆ ಗುರಿಯಿಟ್ಟು ಹೊಡೆದರು. 'ತಗೋ ಸೀತೆಯ' ಅಂದರು ಜನಕ ಮುನಿಗಳು. ಆದರೆ 'ಸಿರಿ ಸೀತಾಮು ದೇವಿ ನನಗಲ್ಲ, ಅಣ್ಣ ರಾಮ ದೇವರಿಗೆ' ಎಂದರು ಲಕ್ಷ್ಮಣ ದೇವರು. ಜನಕ ಮುನಿ ಜಗಳಾಡಿದರು. ಕೊನೆಗೆ ಲಕ್ಷ್ಮಣ ದೇವರು ಕೈ ಚಾಚಿ ಬೊಗಸೆಯಲ್ಲಿ ದೇವಿಯನ್ನು ಪಡೆದರು. ಅಣ್ಣ ರಾಮನಿಗೆ ಕೊಡಲೆಂದು ದೂರ ನಡೆದರು. ಆಗ ಸೀತಾಮು ದೇವರು ಹೇಳಿದರು:

'ನನಗೂ ದಾರಿ ದೂರವಾಗಿದೆ, ಆರಾಮ ಮಾಡಬೇಕು.'

ಲಕ್ಷ್ಮಣ ದೇವರು ಚಿಗುರೆಲೆ ತಂದರು, ಹಾಸು ಬಂಡೆಯ ಮೇಲೆ ಹರಡಿದರು. ಸೀತಾಮು ದೇವರು ಮೊದಲು ಕುಳಿತರು, ಮತ್ತೆ ಹಾಗೇ ಚಿಗುರೆಲೆ ಮೇಲೆ ಒರಗಿದರು.

ಗಾಳಿ ಜೋರಾಗಿ ಬೀಸಿತು. ಸೀತಾಮು ದೇವಿಯ ಸೀರೆ ಗಾಳಿಗೆ ಹಾರಿತು. ಲಕ್ಷ್ಮಣ ದೇವರು ಹಾರಿದ ಸೀರೆ ಸರಿಪಡಿಸಿದರು. ಮತ್ತೆ ಇಬ್ಬರೂ ರಾಮ ದೇವರ ಭೇಟಿ ಮಾಡಿದರು. ಹಾದಿಯಲಿ ಸೀರೆ ಹಾರಿದ ಕತೆಯನ್ನು ರಾಮನಿಗೆ ಹೇಳಲೇ ಎಂದು ಲಕ್ಷ್ಮಣ ದೇವರು ಚಿಂತೆ ಮಾಡಿದರು. ಕೊನೆಗೆ ಹೇಳಿದರು, 'ಚಿಂತೆ ಬೇಡ, ನೀನು ಹಾಗೆ ಮಾಡುವಾಗ ನಾನು ಹಕ್ಕಿಯಾಗಿ ಮರದ ಮೇಲೆ ಕುಳಿತು ನೋಡುತ್ತಿದ್ದೆ' ಎಂದರು ರಾಮ ದೇವರು.